

# ಡಿಜಿಟಲ್ ಸುರಕ್ಷೆಗೆ ಗಮನಿಸಿ

■ ಸುಧೀಂದ್ರ ಪ್ರಸಾದ್ ಇ.ಎಸ್.

ಸಾಮಾಜಿಕ ಮಾಧ್ಯಮ ಎಂಬುದು ಸಂಪರ್ಕ ಸೇತುವೆಯೇ ಹೊರತು ಕ್ರೌರ್ಯ ಮೆರೆಯುವ ತಾಣವಂತೂ ಅಲ್ಲ. ಆದರೆ ಅದರ ಬಳಕೆ ಒಳ್ಳೆಯದಕ್ಕಿಂತ ಇತ್ತೀಚಿನ ದಿನಗಳಲ್ಲಿ ಕೆಟ್ಟದಕ್ಕೆ ಬಳಕೆಯಾಗುತ್ತಿರುವುದೇ ಹೆಚ್ಚು. ಅದರಲ್ಲೂ ದ್ವೇಷದ ಮಾತುಗಳು, ಕಿಡಿ ಹೊತ್ತಿಸುವ ಬೈಗುಳಗಳು, ಅಶ್ಲೀಲ ಸಂದೇಶ ಹಾಗೂ ಕಮೆಂಟ್‌ಗಳು, ಸೈಬರ್ ಬುಲ್ಲಿಯಿಂಗ್ ಸೇರಿದಂತೆ ಹಲವು ಬಗೆಯ ಕ್ರೌರ್ಯಗಳು ವರದಿಯಾಗುತ್ತಲೇ ಇವೆ. ಇವುಗಳಲ್ಲಿ ಕೆಲವು ಪ್ರಕರಣಗಳಲ್ಲಷ್ಟೇ ದೂರುಗಳು ದಾಖಲಾಗಿವೆ. ಫೇಸ್‌ಬುಕ್, ಇನ್‌ಸ್ಟಾಗ್ರಾಂ, ಎಕ್ಸ್, ಥ್ರೆಡ್ಸ್, ಯೂಟ್ಯೂಬ್ ಸೇರಿದಂತೆ ಸಾಮಾಜಿಕ ಮಾಧ್ಯಮಗಳಲ್ಲಿನ ಕೆಲವರ ಪೋಸ್ಟ್‌ಗಳು ಇಂಥ ಬಹಳಷ್ಟು ಕ್ರೌರ್ಯಗಳನ್ನು ಎದುರಿಸಲೇಬೇಕು ಎಂಬಂತಾಗಿದೆ.

ಕೆಲ ಸಮುದಾಯಗಳ ವಿರುದ್ಧ ಧರ್ಮ, ಲಿಂಗಾಧಾರಿತ ದ್ವೇಷದ ಮಾತುಗಳು ಕೇಳಿಬಂದರೆ, ಇನ್ನೂ ಕೆಲವು ಪ್ರಕರಣಗಳಲ್ಲಿ ಅಶ್ಲೀಲ ಮಾತುಗಳು ಅಸಹ್ಯ ಹುಟ್ಟಿಸುವಂತಿವೆ. ಮಹಿಳೆಯರನ್ನೇ ಗುರಿಯಾಗಿಸಿ ಲೈಂಗಿಕವಾಗಿ ಅವಹೇಳನ ಮಾಡುವುದು, ಅಸಹ್ಯ ಕಮೆಂಟ್ಸ್‌ಗಳಿಂದ ವಿಕೃತಿಯನ್ನು ಮೆರೆಯುತ್ತಿದ್ದಾರೆ. ಇನ್ನೂ ಕೆಲವರು ಒಬ್ಬರ ಪೋಸ್ಟ್ ಅನ್ನೇ ಗುರಿಯಾಗಿಸಿ ಕೆಣಕುವ ಅಥವಾ ಅವಹೇಳನ ಮಾಡಿ ವಿಕೃತ ಸಂತೋಷ ಅನುಭವಿಸುವುದನ್ನೂ ಸಾಮಾಜಿಕ ಮಾಧ್ಯಮಗಳಲ್ಲಿ ನೋಡಬಹುದು. ಇಂಥವುಗಳು ಒಬ್ಬರ ಭಾವನೆಗಳಿಗೆ ತೀವ್ರ ಗಾಸಿ ಮಾಡುವಂತಹವು. ಒತ್ತಡ ಸೃಷ್ಟಿಸಿ, ಕುಗ್ಗಿಸುವ ಯತ್ನವೂ ಹೌದು. ಇನ್ನೂ ಕೆಲವರು ಇಂಥ ಕಮೆಂಟ್‌ಗಳಿಗೆ ಅಂಜಿ ಆನ್‌ಲೈನ್ ವೇದಿಕೆಯಿಂದ ನಿರ್ಗಮಿಸಿದ ಉದಾಹರಣೆಗಳೂ ಇವೆ. ಅದರಲ್ಲೂ ಮಹಿಳೆಯರು ಮತ್ತು ಲಿಂಗತ್ವ ಅಲ್ಪಸಂಖ್ಯಾತರು ಕಿಡಿಗೇಡಿಗಳ ಇಂಥ ವಿಲಕ್ಷಣಗಳನ್ನು ನಿತ್ಯ ಎದುರಿಸುತ್ತಿರುತ್ತಾರೆ.

ಸಾಮಾಜಿಕ ಮಾಧ್ಯಮ ವೇದಿಕೆ ಕಲ್ಪಿಸುವ ಕೆಲ ಕಂಪನಿಗಳು ನಿರ್ದಿಷ್ಟ ಮಾರ್ಗಸೂಚಿಗಳನ್ನು ಹೊಂದಿವೆ. ಕಾಲಕಾಲಕ್ಕೆ ಅವುಗಳನ್ನು ಪರಿಷ್ಕರಿಸುತ್ತಿವೆ. ಯಾವುದೇ ವಿಷಯವು ಹಿಂಸಾಚಾರ ಅಥವಾ ದ್ವೇಷವನ್ನು ಬಿತ್ತುವಂತಿದ್ದವೆಂದರೆ ಅಂಥವುಗಳನ್ನು ತಕ್ಷಣವೇ ತೆಗೆದುಹಾಕಿ ಎಚ್ಚರಿಕೆ ನೀಡುವ ಅಲ್ಗರಿದಮ್‌ಗಳನ್ನು ಮೆಟಾ, ಎಕ್ಸ್, ಮೈಕ್ರೊಸಾಫ್ಟ್ ಮತ್ತು ಗೂಗಲ್‌ನಂಥ ಸಂಸ್ಥೆಗಳು ಹೊಂದಿವೆ. ಅನಪೇಕ್ಷಿತ ಅಶ್ಲೀಲ ಸಂದೇಶಗಳು, ಬೆದರಿಕೆ ಅಥವಾ ಚಿತ್ರಗಳನ್ನು ಕಳುಹಿಸುವುದು ಮತ್ತು ಅದನ್ನೇ ಪುನರಾವರ್ತಿಸುವವರ ಖಾತೆಗಳನ್ನು ಅಮಾನತು ಮಾಡುವ ಅಥವಾ ಶಾಶ್ವತವಾಗಿ ನಿಷೇಧಿಸುವ ನೀತಿಗಳನ್ನು ಸಂಸ್ಥೆಗಳು ಹೊಂದಿವೆ.

ಇನ್ನೂ ಕೆಲ ಆಕ್ಷೇಪಾರ್ಹ ಸಂದೇಶಗಳನ್ನು ಸ್ವಯಂಪ್ರೇರಿತವಾಗಿ ತೆಗೆದುಹಾಕುತ್ತವೆ. ಅಂಥ ಸಂದೇಶ ಕಳುಹಿಸುವವರ ಖಾತೆಗಳ ಮೇಲೆ ನಿಗಾ ಇರಿಸುವುದಾಗಿಯೂ ಹೇಳಿಕೊಂಡಿವೆ. ಡಿಜಿಟಲ್ ಕ್ರೌರ್ಯ ಮೆರೆಯುವವರ ವಿರುದ್ಧ ಕ್ರಮ ಕೈಗೊಳ್ಳುವ ದಂಡವನ್ನು ಈ ಕಂಪನಿಗಳು ಬಳಕೆದಾರರಿಗೇ ನೀಡಿವೆ. ತನ್ನ ಪೋಸ್ಟ್‌ಗಳಿಗೆ ಯಾರು ಪ್ರತಿಕ್ರಿಯಿಸಬಹುದು? ಕೆಟ್ಟ ಸಂದೇಶ ಕಳುಹಿಸುವವರ ಕಮೆಂಟ್‌ಗಳನ್ನು ಅಳಿಸಿಹಾಕುವ ಸ್ವಾತಂತ್ರ್ಯವನ್ನು ನೀಡಿವೆ.




ಮೆಟಾ ಕಂಪನಿಯು 2025ರ ಆರಂಭದಲ್ಲಿ ತನ್ನ ನೀತಿಗಳನ್ನು ಪರಿಷ್ಕರಿಸಿದೆ. ಆದರೆ ಇದರಲ್ಲಿ ಬಳಕೆದಾರರ ಹಿತ ಮತ್ತು ವಾಕ್‌ಸ್ವಾತಂತ್ರ್ಯವನ್ನು ಎತ್ತಿ ಹಿಡಿದಿದ್ದರ ಕುರಿತು ಪರ ಹಾಗೂ ವಿರೋಧ ಚರ್ಚೆಗಳು ನಡೆದಿವೆ. ಈ ಹಿಂದೆ ಇದ್ದ ‘ದ್ವೇಷದ ಮಾತು’ ಎಂಬುದರ ಬದಲಾಗಿ ‘ದ್ವೇಷದ ನಡವಳಿಕೆ’ ಎಂದು ಬದಲಿಸಿ ಮಾರ್ಗಸೂಚಿಗಳನ್ನು ಪ್ರಕಟಿಸಿದೆ.

ಮೆಟಾ ಈಗ ಹಕ್ಕುಗಳನ್ನು ಬಳಕೆದಾರರಿಗೆ ನೀಡಿದೆ. ಇಲ್ಲಿ ಬಳಕೆದಾರರು ಆಕ್ಷೇಪಾರ್ಹ ಪೋಸ್ಟ್‌ಗಳನ್ನು ಗುರುತಿಸಿ ಮೆಟಾಗೆ ವರದಿ ಮಾಡಬಹುದು. ಆದರೆ ಕೆಲ ಮಾನವ ಹಕ್ಕುಗಳ ಸಂಘಟನೆಗಳು ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿವೆ. ಕೆಲವರ ಸಂದೇಶಗಳಿಗೆ ಬಳಕೆದಾರರು ಉದ್ದೇಶಪೂರ್ವಕವಾಗಿ, ದ್ವೇಷ ಬಿತ್ತುವ ಅಂಶಗಳಿಲ್ಲದಿದ್ದರೂ ಅಳಿಸಿಹಾಕುವಂತೆ ವರದಿ ಮಾಡುತ್ತಿರುವುದರಿಂದ ವಾಕ್ ಸ್ವಾತಂತ್ರ್ಯ ಹರಣವಾಗುತ್ತಿದೆ ಎಂದು ಆರೋಪಿಸುತ್ತಿದ್ದಾರೆ.

ಕೆಲ ವರ್ಗದವರನ್ನು ಗುರಿಯಾಗಿಸಿ ದ್ವೇಷದ ಹೇಳಿಕೆ, ಅಶ್ಲೀಲ ಕಮೆಂಟ್ಸ್ ಮಾಡುವವರ ವಿರುದ್ಧ ಎಕ್ಸ್ (ಈ ಹಿಂದೆ ಇದು ಟ್ವಿಟರ್ ಆಗಿತ್ತು) ಕೂಡಾ ಕಠಿಣ ಮಾರ್ಗಸೂಚಿ ಸಿದ್ಧಪಡಿಸಿದೆ. ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಕಟವಾಗುವ ಜಾಹೀರಾತುಗಳ ಮೇಲೆ ಮೆಟಾ ಮತ್ತು ಎಕ್ಸ್ ಕಠಿಣ ನೀತಿಗಳನ್ನೇನೋ ಹೇರಿದೆ. ಆದರೂ ಮಹಿಳೆಯರು ಲಿಂಗತ್ವ ಅಲ್ಪಸಂಖ್ಯಾತರಿಗೆ ಸಾಮಾಜಿಕ ಮಾಧ್ಯಮ ಈಗಲೂ ಹೆಚ್ಚು ಸುರಕ್ಷಿತವಲ್ಲದ ಹಾಗೂ ಅತಿ ಹೆಚ್ಚು ಇಂಥ ದೌರ್ಜನ್ಯಗಳಿಗೆ ಗುರಿಯಾಗಬೇಕಾದ ತಾಣವಾಗಿಯೇ ಮುಂದುವರಿದಿದೆ. ■